



**ಶಿಲೆಯಲ್ಲವೀ ಗುಡಿಯು ಕಲೆಯ ಬಲೆಯು... ರಸಿಕತೆಯ ಕಡಲುಕ್ಕಿ ಹರಿವುದಿಲ್ಲಿ...**

**ಕಾರ್ಲಾ ಗುಹೆಗಳಿಗೆ ಹಸುರು ಹೊದಿಕೆ**

ಜೋರು ಮಳೆ ಸುರಿದು ಲೋಣಾವಲಾದ ಗಿರಿಪಂಕ್ತಿಗಳು ಸಣ್ಣಗೆ ಅತ್ತು ಮುಖವೆಲ್ಲಾ ಒದ್ದೆ ಮಾಡಿಕೊಂಡ ಮಗುವಿನಂತೆ ಕಾಣುತ್ತಿದ್ದವು. ಮೊದಲೇ ಹಚ್ಚಹಸುರಿನಿಂದ ಬೆಳಗುತ್ತಲೇ ಇದ್ದ ಆ ಬೆಟ್ಟಗಳು ಮಳೆ ಬಿದ್ದದ್ದೇ ಇನ್ನಷ್ಟು ಮೋಹಕವಾಗಿ ಕಂಡು, ಒಮ್ಮೆ ಆ ಬೆಟ್ಟವನ್ನು ಅಪ್ಪಿ ಹಿಡಿಯಬೇಕು ಎನ್ನುವ ಆಸೆಯಾಗುತ್ತಿತ್ತು. ಮಹಾರಾಷ್ಟ್ರದ ಪಶ್ಚಿಮಘಟ್ಟದ ಸೆರಗಿನಲ್ಲಿ ಬೆಚ್ಚಗೆ ಪವಡಿಸಿರುವ ಈ ಲೋಣಾವಲಾವೆಂದರೆ ಹಾಗೇ, ಇಲ್ಲಿನ ತರಹೇವಾರಿ ಸಿಹಿ ಸಿಹಿ ಚಿಕ್ಕಿಗಳು ನಾಲಗೆಯನ್ನು ಕಾಡಿಸುವಂತೆ, ಇಲ್ಲಿನ ಅಪ್ರತಿಮ ಹಸುರ ಸಿರಿ ಮೈಮನಗಳಲ್ಲಿ ನೂರಾರು ಬಗೆಯ ಪುಳಕಗಳನ್ನು ಹುಟ್ಟಿಸುತ್ತದೆ. ಮಳೆಗಾಲದಲ್ಲಂತೂ ಆ ಪುಳಕಕ್ಕೆ ಹತ್ತಾರು ಮುಖಗಳು. ಹಸುರೇ ಈ ಊರಿನ ಹೆಸರು, ಇಲ್ಲಿನ ಉಸಿರೆಲ್ಲಾ ಹಸುರು ಅನ್ನಿಸಿಬಿಡುತ್ತದೆ.

ಪುಣ್ಯಕ್ಕೆ ನಾವು ಇಲ್ಲಿಯ ನೆಲದ ಮೇಲೆ ಕಾಲಿಟ್ಟಾಗಲೂ ಮಳೆಗಾಲ ಹಿಡಿದಿತ್ತು. ಸೋ ಸೋ ಎಂದು ಸುರಿಯುವ ಮಳೆಯ ಸಂಗೀತವನ್ನು ಕೇಳುತ್ತ ಲೋಣಾವಲಾ ಮೈಮರೆತಿತ್ತು. ಇಲ್ಲಿನ ಮನಮೋಹಕ ಕಾರ್ಲಾ ಗುಹಾಂತರ ದೇವಾಲಯದ ಕಲ್ಲುಗಳು ಕೂಡ ಜಿಟಿಜಿಟಿ ಮಳೆಗೆ ಮೈಯೊಡ್ಡಿಕೊಳ್ಳುತ್ತ, ‘ಬನ್ನಿ, ನನ್ನ ಗತಕಾಲದ ಕಥೆಗಳನ್ನೆಲ್ಲಾ ಕೇಳುವಿರಂತೆ, ಈ ಮಳೆಯಲ್ಲಿ ನೆನೆಯುತ್ತ ನಿಮ್ಮನ್ನು ಇತಿಹಾಸದ ಕಥನಗಳಲ್ಲಿ ತೋಯಿಸಿಬಿಡುವೆ’ ಎನ್ನುತ್ತ ವಿಚಿತ್ರ ಜೀವನೋತ್ಸಾಹದಿಂದ ನಿಂತಿತ್ತು.

ಪುಣೆ–ಮುಂಬೈ ಹೆದ್ದಾರಿಯಲ್ಲಿ ಸಿಗುವ ಲೋಣಾವಲಾ ಎನ್ನುವ ಗ್ರಾಮ ಹತ್ತಾರು ಜಲಪಾತಗಳ, ಶಿಖರಗಳ ಆಡುಂಬೊಲ. ಈ ಲೋಣಾವಲಾ ಪಟ್ಟಣದಿಂದ 10 ಕಿ.ಮೀ. ಅಂತರದಲ್ಲಿರುವ ಕಾರ್ಲಾ ಗುಹಾಂತರ ಬೌದ್ಧ ದೇವಾಲಯ ಇತಿಹಾಸಪ್ರಿಯರಲ್ಲಿ ಸ್ವರ್ಗದಂತಹ ಅನುಭೂತಿ ಹುಟ್ಟಿಸುತ್ತದೆ. ‘ಕಾರ್ಲಾ’, ‘ಕಾರ್ಲೆ’ ಅಂತೆಲ್ಲಾ ಕರೆಸಿಕೊಳ್ಳುವ ಈ ಗುಹೆ ಸುಮಾರು 2000 ವರ್ಷಗಳಷ್ಟು ಹಳೆಯದು.

ಕಾರ್ಲಾ, ಭಾರತದ ಅತಿ ಪುರಾತನ ಬೌದ್ಧ ಗುಹೆಗಳ ಪೈಕಿ ಅತ್ಯಂತ ಮುಕುಟಪ್ರಾಯವಾದ ಗುಹೆ. ಇದು ಬೌದ್ಧರ ಆರಾಧನಾ ಕೇಂದ್ರವಾದರೂ ಐತಿಹಾಸಿಕ ದೃಷ್ಟಿಯಿಂದ ನೋಡಿದರೆ ಇದೊಂದು ಮಹತ್ವದ ಗಣಿ.

ಮಹಾರಾಷ್ಟ್ರದ ಪುಣೆಯಿಂದ 60 ಕಿ.ಮೀ. ದೂರ, ಮುಂಬೈಯಿಂದ 100 ಕಿ.ಮೀ. ದೂರದಲ್ಲಿರುವ ಮಾವಳ್ ತಾಲ್ಲೂಕಿನಲ್ಲಿರುವ ಈ ಕಾರ್ಲಾ ಗುಹೆಯು ಮಳೆಗಾಲದಲ್ಲಿ ಕಟ್ಟಿಕೊಡುವ ಚಿತ್ರಕಥನವೇ ಚೇತೋಹಾರಿ.

## ಗುಹಾಂತರಾಳ

ಕಾರ್ಲಾ ಗುಹೆಯನ್ನು ಕಣ್ತುಂಬಿಕೊಳ್ಳಬೇಕು ಎನ್ನುವ ತರಾತುರಿಯಲ್ಲಿ ಮಾವಳ್ ಗ್ರಾಮಕ್ಕೆ ತಲುಪಿ, ಗುಹೆಯತ್ತ ಕರೆದೊಯ್ಯುವ ಮೆಟ್ಟಿಲುಗಳನ್ನೇರುವಾಗ ಜಿಟಿಜಿಟಿ ಮಳೆ ಕೊಂಚ ಜೋರಾಯಿತು. ಕೊಡೆ ಬಿಡಿಸುತ್ತಲೇ ಕೊಡೆಯ ಮರೆಯಿಂದ ಕಾಣುವ ಲೋಣಾವಲಾದ ಶಿಖರಗಳು, ಎತ್ತರದಿಂದ ಕಾಣಿಸುತ್ತಿದ್ದ ಪುಟ್ಟ ಪುಟ್ಟ ಊರಿನ ಹೊಲ, ಒಂದಷ್ಟು ಮಂಜಿನ ಮಾಲೆ ಮತ್ತು ಕನಸಿನಂತೆ ಕಾಣುತ್ತಿದ್ದ ಮನೆಗಳನ್ನು ನೋಡುತ್ತಲೇ ಮೆಟ್ಟಿಲೇರತೊಡಗಿದವು. ಹಾಗೇ ಏರುತ್ತಲೇ ಜೋರಾಗಿ ಮಳೆಯ ಥಂಡಿಗಾಳಿ ಬೀಸಿ, ಕೊಂಚ ದೂರದಲ್ಲಿ ಕಾಣಿಸುತ್ತಿದ್ದ ಗುಹೆಗಳೇ ಗಾಳಿಯಲ್ಲಿ ತೇಲಿ, ಗಾಳಿಗೂ ಇತಿಹಾಸದ ನೂರಾರು ಕಥೆಗಳನ್ನು ಗುಟ್ಟಾಗಿ ಹೇಳುವಂತೆ, ಕಥೆ ಕೇಳಿ ಗಾಳಿಗೂ ಜೋರು ಮೂಡು ಬಂದು ಅದು ಮತ್ತಷ್ಟು ತಂಪಾದಂತೆ ಅನ್ನಿಸುತ್ತಿತ್ತು.

ಮೆಟ್ಟಿಲ ಆಸುಪಾಸು ಲೋಣಾವಲಾ ಸ್ಪೆಷಲ್ ಚಿಕ್ಕಿ, ಸಿಹಿತಿಂಡಿ, ಖಾಕಡಿ, ಶರಬತ್ತು ಮಾರುವ, ಗುಹೆಯ ಪಕ್ಕದಲ್ಲಿರುವ ‘ಏಕ ದೇವಿಗೆ ಕುಂಕುಮ, ಹಣ್ಣುಗಾಯಿ, ಕರ್ಪೂರ ಅರ್ಪಿಸಿ’ ಎಂದು ಕೂಗುವ ವ್ಯಾಪಾರಿಗಳು – ಇವುಗಳನ್ನೆಲ್ಲಾ ನೋಡುವುದೇ ಒಂದು ಸುಂದರ ಅನುಭೂತಿ. ತೀರಾ ಕಡಿದಾದ ಸುಮಾರು ಇನ್ನೂರು ಮೆಟ್ಟಿಲು ಹತ್ತಿಬಿಟ್ಟರೆ ಭವ್ಯವಾಗಿ ಉದ್ದಕ್ಕೆ ವಿಶಾಲವಾಗಿ ಚಾಚಿರುವ ಕಾರ್ಲಾ ಗುಹೆ, ‘ಅಬ್ಬಾ, ಅಂತೂ ಮಳೆಯಲ್ಲಿ ನೆನೆಯುತ್ತ ನನ್ನ ನೋಡಲು ಬಂದಿರಲ್ಲಾ’ ಎಂದು ಸ್ವಾಗತಿಸಿದಂತನ್ನಿಸಿತು.

ಇಡೀ ಗುಹೆಯನ್ನೇ ಹೊರಗಿನಿಂದ ನೋಡುತ್ತ ನಿಂತಾಗ, ಈ ಗುಹೆ ಎಷ್ಟೊಂದು ಸರಳವಾಗಿದೆಯಲ್ಲಾ? ಇಲ್ಲಿ ಅಂತಹದ್ದೇನೂ ಇರಲಿಕ್ಕಿಲ್ಲ ಅನ್ನಿಸಿಬಿಟ್ಟಿತು. ಆದರೆ ಯಾವಾಗ ಮುಂಭಾಗದ ದ್ವಾರದ ಬಳಿ ಬಂದೆವೋ ಆಗ ಅಲ್ಲಿನ

